# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟದೆ)

ನಿಗಮ ಕಚೇರಿ
ನಂ:29, ಚಾ.ವಿ.ಸ.ನಿ.ನಿ.,
ವಿಜಯನಗರ, 2ನೇ ಹಂತ, ಹಿನಕಲ್,
ಮೈಸೂರು-5700107
CIN:U40109KA2004SGC035177
Website: WWW.cescmysore.org

ಕಚೇರಿ ವಿಳಾಸ
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಕಾರ್ಯ ಮತ್ತು ಪಾಲನೆ ಕೇಂದ್ರ ಉಪ - ವಿಭಾಗ,
ಎಂ.ಪಿ.ಎಲ್. ಕಟ್ಟಡ, ಶ್ರೀ ಹರ್ಷ ರಸ್ತೆ, ಮೈಸೂರು-570001
Email ID: aeecz@cescmysore.org
ದೂರವಾಣಿ ಸಂಖ್ಯೆ: 0821-2421902

ಸಂಖ್ಯೆ:ಸ.ಕಾ.ನಿ.ಇಂ(ವಿ)/ಸ.ಇಂ.(ತಾಂ)/ಎಫ್-51/19-20/3723 ದಿನಾಂಕ:- 20/11/19

ಗೆ,

ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಚಾ.ವಿಸನಿನಿ, ಕಾರ್ಯ ಮತ್ತು ಪಾಲನೆ,
ನ.ರಾ.ಮೊಹಲ್ಲಾ, ವಿಭಾಗ,
ಮೈಸೂರು.

ಮಾನ್ಯರೇ,

**ವಿಷಯ:-ದಿನಾಂಕ: 16.10.2019 ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ, ಎನ್.ಆರ್ ಮೊಹಲ್ಲಾ ವಿಭಾಗ, ಚಾ.ವಿ.ಸ.ನಿ.ನಿ, ಮೈಸೂರು ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ಸಭೆಯ ಅನುಪಾಲನಾ ವರದಿ ಸಲ್ಲಿಸುತ್ತಿರುವ ಬಗ್ಗೆ.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:16.10.2019 ರಂದು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ, ಎನ್.ಆರ್ ಮೊಹಲ್ಲಾ ವಿಭಾಗ, ಚಾ.ವಿ.ಸ.ನಿ.ನಿ, ಮೈಸೂರು ರವರ ಅಧ್ಯಕ್ಷತೆಯಲ್ಲಿ ಕೇಂದ್ರ ಉಪ ವಿಭಾಗದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿ ಹಾಗೂ ಸಭೆಯಲ್ಲಿ ನೀಡಲಾದ ದೂರುಗಳಿಗೆ ಕ್ರಮವಹಿಸಿರುವ ಸಂಬಂಧ ಈ ಕೆಳಕಂಡಂತೆ ಅನುಪಾಲನಾ ವರದಿಯನ್ನು ತಮ್ಮ ಅವಗಾಹನೆಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

**ಸಭೆಯಲ್ಲಿ ಹಾಜರಿದ್ದವರು:-**

| ಕ್ರ.ಸಂ | ಹೆಸರು | ಮೊಬೈಲ್ ನಂ |
|---|---|---|
| 1 | ಶ್ರೀ ಸಿ.ಆರ್ ಅಶ್ವತ್ಥನಾರಾಯಣ | 9449833792 |
| 2 | ಶ್ರೀ ಎಸ್.ಜೆ ಜಗದೀಶ್ | 9901748421 |

| ಕ್ರ.ಸಂ | ಅರ್ಜಿದಾರರ ಹೆಸರು ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1 | ಶ್ರೀ ಸಿ.ಆರ್ ಅಶ್ವತ್ಥನಾರಾಯಣ 9449833792 | ದಸರಾ-2019 ರ ದೀಪಾಲಂಕಾರದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎನ್.ಆರ್ ಮೊಹಲ್ಲಾ ವಿಭಾಗ ರವರು ದೀಪಾಲಂಕಾರದ ಯಶಸ್ಸಿಗೆ ಉಪ ವಿಭಾಗದ ಸಿಬ್ಬಂದಿ ಹಾಗೂ ಅಧಿಕಾರಿಗಳನ್ನು ಅಭಿನಂದಿಸಿರುತ್ತಾರೆ. |
| 2 | ಶ್ರೀ ಸಿ.ಆರ್ ಅಶ್ವತ್ಥನಾರಾಯಣ 9449833792 | ಉಪ ವಿಭಾಗದ ಸಿದ್ಧಾರ್ಥ ಶಾಖೆಯಲ್ಲಿನ ಆರ್. ಆರ್ ಸಂಖ್ಯೆ 4CZ69131-ಮಹೇಶ್ವರಿ ಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮದ ಬಗ್ಗೆ ಮಾಹಿತಿ ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎನ್.ಆರ್ ಮೊಹಲ್ಲಾ ವಿಭಾಗ ರವರು ಉತ್ತರಿಸುತ್ತಾ ಪ್ರಕರಣಕ್ಕೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರಿಗಳಿಂದ ಕೇಂದ್ರ ಉಪ ವಿಭಾಗ ಕಚೇರಿಯಿಂದ ಈಗಾಗಲೇ ಸ್ಪಷ್ಟೀಕರಣ ಕೋರಿ ಪತ್ರ ವ್ಯವಹಾರ |

Scanned by CamScanner

| | | | |
|---|---|---|---|
| | | | ನಡೆಸಲಾಗಿದೆ ಎಂದು ತಿಳಿಸಿರುತ್ತಾರೆ. ಮುಂದುವರೆದು, ಆರ್. ಆರ್ ಸಂಖ್ಯೆ 4CZ69131 ರ ಗ್ರಾಹಕರಿಗೆ ಅಂತಿಮ ಕಾರಣ ಕೇಳಿ ನೋಟಿಸ್ ನೀಡಿ, ವಿದ್ಯುತ್ ಸಂಪರ್ಕ ಕಡಿತಗೊಳಿಸಿ, ಮಾಪಕ ಕಳಚುವಂತೆ ಸಹಾಯಕ ಇಂಜಿನಿಯರ್(ವಿ), ಸಿದ್ಧಾರ್ಥ ಶಾಖೆ ರವರಿಗೆ ಸೂಚಿಸಿರುತ್ತಾರೆ. |
| 3 | ಶ್ರೀ ಎಸ್.ಜೆ ಜಗದೀಶ್ 9901748421 | ಮಂಡಿಮೊಹಲ್ಲಾ ಶಾಖಾ ವ್ಯಾಪ್ತಿಯ ಆರ್.ಆರ್ ಸಂಖ್ಯೆ 1CZC49018 ಗೆ ಜಕಾತಿ ದುರ್ಬಳಕೆಯಡಿ ಹಿಂಬಿಲ್ಲು ಮಾಡಿ, ಹಿಂಬಿಲ್ಲಿನ ನೋಟಿಸ್ ಅನ್ನು ವಿತರಿಸಲಾಗಿರುತ್ತದೆ. ಸದರಿ ನೋಟಿಸ್‌ನಲ್ಲಿ ಹಿಂಬಿಲ್ಲು ಮೊತ್ತ ಪಾವತಿಗೆ 30 ದಿನಗಳ ಕಾಲಾವಕಾಶ ನೀಡಿದ್ದರೂ ಸಹ, ಅವಧಿಗೆ ಮುನ್ನವೇ ಯಾವುದೇ ಮುನ್ಸೂಚನೆ ನೀಡದೆ ವಿದ್ಯುತ್ ಸಂಪರ್ಕ ಕಡಿತಗೊಳಿಸಿರುತ್ತಾರೆ ಎಂದು ದೂರಿರುತ್ತಾರೆ. | ಸಹಾಯಕ ಇಂಜಿನಿಯರ್(ವಿ) ಮಂಡಿಮೊಹಲ್ಲಾ ಶಾಖೆ ರವರು ಉತ್ತರಿಸುತ್ತಾ, ಸದರಿ ಸ್ಥಾವರವು ಜಾಹಿರಾತು ಫಲಕವಾಗಿದ್ದು, ಹಿಂಬಿಲ್ಲಿನ ನೋಟಿಸ್ ನೀಡಲು ಸಿಬ್ಬಂದಿ ಭೇಟಿ ನೀಡಿದಾಗ ಮೊದಲು ನೋಟಿಸ್ ಅನ್ನು ಸ್ವೀಕರಿಸಿ, ಸಹಿ ಮಾಡಿ, ನಂತರ ಹಿಂಬಿಲ್ಲಿನ ನೋಟಿಸ್ ಎಂದು ತಿಳಿದಾಗ ಪಡೆದುಕೊಳ್ಳುವುದಿಲ್ಲಾ ಎಂದು ಸ್ಥಳದಲ್ಲಿದ್ದ ಗ್ರಾಹಕರ ಪ್ರತಿನಿಧಿ ತಿರಸ್ಕರಿಸಿರುತ್ತಾರೆ. ಹಾಗಾಗಿ ಸ್ಥಾವರಕ್ಕೆ ವಿದ್ಯುತ್ ಸಂಪರ್ಕ ಕಡಿತಗೊಳಿಸಿರುವುದಾಗಿ ಸಹಾಯಕ ಇಂಜಿನಿಯರ್(ವಿ), ಮಂಡಿಮೊಹಲ್ಲಾ ಶಾಖೆ ರವರು ತಿಳಿಸಿರುತ್ತಾರೆ.<br>ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಉತ್ತರಿಸುತ್ತಾ, ಗ್ರಾಹಕರ ಪರವಾಗಿ ಹಾಜರಿದ್ದ ಶ್ರೀ ಎಸ್.ಜೆ ಜಗದೀಶ್ ರವರಿಗೆ ಹಿಂಬಿಲ್ಲಿನ ನೋಟಿಸ್ ಅನ್ನು ಸ್ವೀಕರಿಸಲು ಕೋರಿ, 30 ದಿನಗಳ ಒಳಗಾಗಿ ಮೊತ್ತ ಪಾವತಿ ಮಾಡುವಂತೆ ತಿಳಿಸಿರುತ್ತಾರೆ. ಮುಂದುವರೆದು, ಸಹಾಯಕ ಇಂಜಿನಿಯರ್(ವಿ), ಮಂಡಿಮೊಹಲ್ಲಾ ಶಾಖೆ ರವರಿಗೆ ವಿದ್ಯುತ್ ಮರು ಸಂಪರ್ಕ ಒದಗಿಸುವಂತೆ ಸೂಚಿಸಿರುತ್ತಾರೆ. |

ಸಭೆಯಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಸಭಾಧ್ಯಾಕ್ಷರು ವಂದನೆಯನ್ನು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ತಮ್ಮ ವಿಶ್ವಾಸಿ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಚಾ.ವಿ.ಸಾ.ನಿ.ನಿ, ಕೇಂದ್ರ ಉಪವಿಭಾಗ,
ಮೈಸೂರು

ಪ್ರತಿಯನ್ನು

1. ಅಧೀಕ್ಷಕ ಇಂಜನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾ.ವಿ.ಸ.ನಿ.ನಿ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಕಚೇರಿ ಪ್ರತಿ

Scanned by CamScanner